ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್



ಕಲಾವಿದ ಡನ್ನೋ

03





ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್ 03

ಕಲಾವಿದ ಡನ್ನೋ

ರೇಖಾ ಚಿತ್ರಗಳುಃ ಬೋರಿಸ್ ಕಲಾಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಬ್ಲಾಬ್ಸ್ ತುಂಬಾ ಒಳ್ಳೆಯ ಕಲಾವಿದನಾಗಿದ್ದನು. ಅವನು ಯಾವಾಗಲೂ ಉದ್ದನೆಯ ಅಂಗಿಯನ್ನು (ಸ್ಮಾಕ್) ಧರಿಸುತ್ತಿದ್ದನು. ಕೈಯಲ್ಲಿ ಬಣ್ಣಗಳಿರುವ ಪ್ಯಾಲೆಟ್ ಹಿಡಿದು, ತನ್ನ ಈಸೆಲ್‌ನ ಮುಂದೆ, ಸ್ಮಾಕ್ ಧರಿಸಿ, ಉದ್ದನೆಯ ಕೂದಲನ್ನು ಹಿಂದೆ ಸರಿಸಿಕೊಂಡು ನಿಂತಾಗ ಅವನು ತುಂಬಾ ಭವ್ಯವಾದ ಕಲಾವಿದನಾಗಿ ಕಾಣುತ್ತಿದ್ದನು. ಅವನನ್ನು ನೋಡಿದ ಯಾರಿಗಾದರೂ ಅವನು ನಿಜವಾದ ಕಲಾವಿದನೆಂದು ತಕ್ಷಣ ತಿಳಿಯುತ್ತಿತ್ತು.

ಮೈಟ್ಸ್‌ಗಳು ಡನ್ನೋನ ಸಂಗೀತವನ್ನು ಕೇಳಲು ನಿರಾಕರಿಸಿದಾಗ, ಅವನು ತಾನೂ ಒಬ್ಬ ಕಲಾವಿದನಾಗಬೇಕೆಂದು ತೀರ್ಮಾನಿಸಿದನು. ಒಂದು ದಿನ ಅವನು ಬ್ಲಾಬ್ಸ್‌ನ ಬಳಿಗೆ ಬಂದು ಹೇಳಿದನು:

"ಕೇಳಪ್ಪ, ಬ್ಲಾಬ್ಸ್, ನಾನು ಒಬ್ಬ ಕಲಾವಿದನಾಗಲು ತೀರ್ಮಾನಿಸಿದ್ದೇನೆ. ನನಗೆ ಸ್ವಲ್ಪ ಬಣ್ಣ ಮತ್ತು ಕುಂಚ ಕೊಡು."

ತುಂಬಾ ಉದಾರನಾಗಿದ್ದ ಬ್ಲಾಬ್ಸ್ ತನ್ನ ಹಳೆಯ ಬಣ್ಣ ಮತ್ತು ಕುಂಚಗಳನ್ನು ಡನ್ನೋಗೆ ಕೊಟ್ಟನು.

ಅದೇ ಸಮಯದಲ್ಲಿ ಡನ್ನೋನ ಸ್ನೇಹಿತ ಗಂಕಿ ಅವನನ್ನು ನೋಡಲು ಬಂದನು.

"ಕುಳಿತುಕೋ, ಗಂಕಿ, ನಾನು ನಿನ್ನ ಚಿತ್ರವನ್ನು ಬರೆಯುತ್ತೇನೆ.' ಎಂದು ಡನ್ನೋ ಹೇಳಿದನು. ತನ್ನ ಚಿತ್ರವನ್ನು ತೆಗೆದುಕೊಳ್ಳಲು ಗಂಕಿಗೆ ತುಂಬಾ ಸಂತೋಷವಾಯಿತು. ಅವನು ಡನ್ನೋನ ಎದುರಿಗೆ ಚಿತ್ರ ತೆಗೆಯುವ ರೀತಿಯಿಂದ ಕುರ್ಚಿಯ ಮೇಲೆ ಕುಳಿತುಕೊಂಡನು. ಡನ್ನೋ ಚಿತ್ರವನ್ನು ಚಿತ್ರಿಸಲು ಆರಂಭಿಸಿದನು.



ಡನ್ನೋನು ಗಂಕಿಯನ್ನು ಆತ ನಿಜವಾಗಿ ಇದ್ದುದಕ್ಕಿಂತಲೂ ಹೆಚ್ಚು ಸುಂದರನಾಗಿ ಕಾಣುವ ಹಾಗೆ ಚಿತ್ರಿಸಲು ಬಯಸಿದನು. ಆದ್ದರಿಂದ ಅವನಿಗೆ ಕೆಂಪು ಮೂಗು, ಹಸಿರು ಕಿವಿಗಳು, ನೀಲಿ ತುಟಿಗಳು ಮತ್ತು ಕಿತ್ತಳೆ ಬಣ್ಣದ ಕಣ್ಣುಗಳನ್ನು ಚಿತ್ರಿಸಿದನು. ಗಂಕಿಗೆ ತನ್ನ ಭಾವಚಿತ್ರವನ್ನು ನೋಡುವ ಆತುರವಾಗಿತ್ತು. ಅವನಿಗೆ ಅಷ್ಟು ಆತುರವಾಗಿದ್ದರಿಂದ ಅವನು ತನ್ನ ಕುರ್ಚಿಯ ಮೇಲೆ ಸುಮ್ಮನೆ ಕುಳಿತುಕೊಳ್ಳದೆ ಅತ್ತಿತ್ತ ಆಡುತ್ತಲೇ ಇದ್ದನು.

"ನೀನು ಹೀಗೆ ಅತ್ತಿತ್ತ ಆಡುತ್ತಲೇ ಇದ್ದರೆ, ಚಿತ್ರವೇ ನಿನ್ನಂತಿರುವುದಿಲ್ಲ," ಎಂದು ಡನ್ನೋ ಹೇಳಿದನು.

"ಈಗ ಅದು ನನ್ನಂತೆಯೇ ಕಾಣಿಸುತ್ತಿದೆಯೇ?" ಎಂದು ಗಂಕಿ ಕೇಳಿದನು.

"ತುಂಬಾ ಕಾಣುತ್ತಿದೆ," ಎಂದು ಡನ್ನೋ ನೇರಳೆ ಬಣ್ಣದ ಮೀಸೆಯನ್ನು ಅವನ ಮುಖದ ಮೇಲೆ ಚಿತ್ರಿಸುತ್ತಾ ಹೇಳಿದನು.

"ನಾನು ಅದನ್ನು ನೋಡಬಹುದೇ?" ಎಂದು ಭಾವಚಿತ್ರ ಪೂರ್ಣವಾದಾಗ ಗಂಕಿ ಕೇಳಿದನು.

ಡನ್ನೋ ಅದನ್ನು ಅವನಿಗೆ ತೋರಿಸಿದನು.


"ನಾನು ನಿಜವಾಗಿಯೂ ಹೀಗೆ ಕಾಣುತ್ತೇನೆಯೇ?" ಎಂದು ಬೆಚ್ಚಿಬಿದ್ದ ಗಂಕಿ ಕೂಗಿದನು.


"ಖಂಡಿತವಾಗಿಯೂ ಕಾಣುತ್ತೀಯ," ಎಂದು ಡನ್ನೋ ಹೇಳಿದನು.





"ನನ್ನ ಮುಖದ ಮೇಲೆ ಮೀಸೆ ಏಕೆ? ನನಗೆ ಮೀಸೆಯೇ ಇಲ್ಲವಲ್ಲ.'
"ಸರಿ, ಎಂದಾದರೂ ಒಂದು ದಿನ ನಿನ್ನ ತುಟಿಯ ಮೇಲೆ ಮೀಸೆ ಮೂಡುತ್ತದೆ.'
"ನನ್ನ ಮೂಗನ್ನು ಏಕೆ ಕೆಂಪಾಗಿ ಬಣ್ಣಿಸಿದೆ?"
"ನಿನ್ನ ಮೂಗು ಇನ್ನೂ ಸುಂದರವಾಗಿ ಕಾಣುವಂತೆ ಮಾಡಲು ಅದಕ್ಕೆ ಕೆಂಪು ಬಣ್ಣ ಕೊಟ್ಟಿದ್ದೇನೆ.'
" ನನ್ನ ಕೂದಲನ್ನು ನೀಲಿ ಬಣ್ಣದ್ದಾಗಿ ಏಕೆ ಮಾಡಿದೆ? ನನ್ನ ಕೂದಲು ನಿಜವಾಗಿಯೂ ನೀಲಿಯೇ?"
"ಹೌದು, ಆದರೆ ನಿನಗೆ ಅದು ಇಷ್ಟವಾಗದಿದ್ದರೆ, ಅದನ್ನು ಹಸಿರು ಬಣ್ಣ ಕೊಡುತ್ತೇನೆ.' ಎಂದು ಡನ್ನೋ ಹೇಳಿದನು.
"ಇದು ತುಂಬಾ ಕೆಟ್ಟ ಚಿತ್ರ," ಎಂದು ಗಂಕಿ ಹೇಳಿದನು. 'ಇಲ್ಲಿ ನೋಡು, ಇದನ್ನು ನಾನು ಹರಿದು ಹಾಕುತ್ತೇನೆ.'
"ಒಂದು ಕಲಾಕೃತಿಯನ್ನು ಹರಿದು ಹಾಕಲು ನಾನು ಬಿಡುವುದಿಲ್ಲ," ಎಂದು ಡನ್ನೋ ಹೇಳಿದನು.
ಗಂಕಿ ಅವನಿಂದ ಆ ಚಿತ್ರವನ್ನು ಕಸಿದುಕೊಳ್ಳಲು ಪ್ರಯತ್ನಿಸಿದನು ಮತ್ತು ಇವರಿಬ್ಬರ ನಡುವೆ ಎಳೆದಾಟ ನಡೆಯಿತು.
ಅವರ ಗದ್ದಲ ಹೆಚ್ಚಿದಂತೆ ಆದಾಗ ಗಾಬರಿಯಾಗಿ ಡಾ. ಪಿಲ್‌ಮನ್ ಮತ್ತು ಇನ್ನೂ ಕೆಲವು ಮೈಟ್ಸಗಳು ಓಡಿಬಂದರು.
"ನೀವು ಯಾವುದಕ್ಕಾಗಿ ಜಗಳವಾಡುತ್ತಿದ್ದೀರಿ?" ಎಂದು ಅವರು ಕೇಳಿದರು.
"ಇದನ್ನು ನೋಡಿ, ಇದು ಯಾರ ಚಿತ್ರ? ಇದು ನನ್ನಂತೆ ಕಾಣುತ್ತದೆಯೇ?" ಎಂದು ಗಂಕಿ ಸಿಟ್ಟಿನಿಂದ ಕೇಳಿದನು.
"ಸ್ವಲ್ಪವೂ ಇಲ್ಲ, ಇದು ಹೊಲದಲ್ಲಿ ನಿಲ್ಲಿಸುವ ಬೆದರುಬೊಂಬೆಯಂತೆ ಕಾಣುತ್ತದೆ.' ಎಂದು ಮೈಟ್ಸಗಳು ಹೇಳಿದರು.





"ಚಿತ್ರದ ಮೇಲೆ ಹೆಸರೇ ಇಲ್ಲದಿರುವುದೇ ಬಹುಶಃ ಕಾರಣವಿರಬೇಕು. ನಾನು ಅದರ ಮೇಲೆ ಹೆಸರು ಬರೆದರೆ ಅದು ಯಾರದು ಎಂಬುದು ಕೂಡಲೇ ಗೊತ್ತಾಗುತ್ತದೆ." ಎಂದು ಡನ್ನೋ ಹೇಳಿದನು.

ಅವನು ಒಂದು ಪೆನ್ಸಿಲ್ ತೆಗೆದುಕೊಂಡು ದೊಡ್ಡ ಮುದ್ರಾಕ್ಷರಗಳಲ್ಲಿ 'ಗಂಕಿ' ಎಂದುಬರೆದನು. ನಂತರ ಆ ಚಿತ್ರವನ್ನು ಗೋಡೆಯ ಮೇಲೆ ನೇತು ಹಾಕಿದನು.

"ಇದು ಎಲ್ಲರೂ ನೋಡುವ ಹಾಗೆ ಇಲ್ಲೇ ನೇತಾಡಲಿ," ಎಂದು ಡನ್ನೋ ಹೇಳಿದನು.

"ನಾನು ಸುಮ್ಮನಿರಲಾರೆ. ನೀನು ಮಲಗಿದ ತಕ್ಷಣ ನಾನು ಅದನ್ನು ಕೆಳಗಿಳಿಸಿ ಹರಿದುಹಾಕುತ್ತೇನೆ." ಎಂದು ಗಂಕಿ ಹೇಳಿದನು.

"ನಾನು ಮಲಗುವುದೇ ಇಲ್ಲ. ಇಡೀ ರಾತ್ರಿ ಎಚ್ಚರವಾಗಿಯೇ ಇದ್ದು ಅದನ್ನು ಕಾಪಾಡುತ್ತೇನೆ." ಎಂದು ಡನ್ನೋ ಹೇಳಿದನು.

ಗಂಕಿಗೆ ಸಾಕಷ್ಟು ಕೋಪ ಬಂದಿತ್ತು. ಸಿಟ್ಟಿನಲ್ಲಿಯೇ ಬಾಗಿಲನ್ನು ಜೋರಾಗಿ ಅಪ್ಪಳಿಸಿ ಅವನು ತನ್ನ ಮನೆಗೆ ಹೋಗಿಬಿಟ್ಟನು.

ಡನ್ನೋ ನಿಜವಾಗಿಯೂ ಇಡೀ ರಾತ್ರಿ ಎಚ್ಚರವಾಗಿಯೇ ಇದ್ದನು. ಉಳಿದವರೆಲ್ಲರೂ ಮಲಗಿದ ನಂತರ, ಅವನು ತನ್ನ ಎಲ್ಲಾ ಸ್ನೇಹಿತರ ಚಿತ್ರಗಳನ್ನು ಚಿತ್ರಿಸತೊಡಗಿದನು. ರೋಲಿ ಪೋಲಿಯನ್ನು ಸಾಕಷ್ಟು ದಪ್ಪ ತೋರಿಸಬೇಕಾಗಿದ್ದರಿಂದ ಅವರು ಚಿತ್ರದ ಚೌಕಟ್ಟಿನ ಒಳಗೆ ಹಿಡಿಸಲಿಲ್ಲ.





ಅವನು ಸ್ವಿಫ್ಟಿಗೆ ಉದ್ದವಾದ, ಸಣ್ಣ ಕಾಲುಗಳು ಮತ್ತು ನಾಯಿಯ ಬಾಲವನ್ನು ಚಿತ್ರಿಸಿದನು. ಶಾಟ್ ತನ್ನ ನಾಯಿ ಡಾಟ್‌ನ ಮೇಲೆ ಕುಳಿತಿರುವಂತೆ ಚಿತ್ರಿಸಿದನು. ಡಾ. ಪಿಲ್‌ಮನ್ ಅವರ ಮೂಗಿನ ಬದಲಿಗೆ ಥರ್ಮಾಮೀಟರ್ ಅನ್ನು ಚಿತ್ರಿಸಿದನು. ಡೂನೂಗೆ ಕತ್ತೆಯ ಕಿವಿಗಳನ್ನು ಚಿತ್ರಿಸಿದನು. ಒಟ್ಟಾರೆ ಹೇಳುವುದಾದರೆ, ಅವರೆಲ್ಲರೂ ತುಂಬಾ ಮೂರ್ಖರಂತೆ ಕಾಣುವಂತೆ ಚಿತ್ರಿಸಿದನು. ಬೆಳಿಗ್ಗೆ ಅವನು ಎಲ್ಲಾ ಚಿತ್ರಗಳ ಮೇಲೆ ಹೆಸರುಗಳನ್ನು ಬರೆದು ಅವುಗಳನ್ನು ನೇತುಹಾಕಿದನು. ಅದು ನಿಜವಾದ ಚಿತ್ರಕಲಾ ಪ್ರದರ್ಶನವಾಗಿತ್ತು.

ಮೊದಲು ಎಚ್ಚರಗೊಂಡವನು ಡಾ. ಪಿಲ್‌ಮನ್.

ಚಿತ್ರಗಳನ್ನು ನೋಡಿದ ತಕ್ಷಣವೇ ಅವನು ನಗಲು ಆರಂಭಿಸಿದನು. ಅವನಿಗೆ ಅವು ತುಂಬಾ ಇಷ್ಟವಾದುದರಿಂದ ಅವನ್ನು ಇನ್ನೂ ಚೆನ್ನಾಗಿ ನೋಡಲು ತನ್ನ ಕನ್ನಡಕವನ್ನು ಧರಿಸಿದನು. ಅವನು ಪ್ರತಿಯೊಂದು ಚಿತ್ರವನ್ನು ಪರಿಶೀಲಿಸುತ್ತಾ, ಜೋರಾಗಿ ನಗುತ್ತಿದ್ದನು.

"ಡನ್ನೋ ಶಾಬ್ಬಾಸ! ನನ್ನ ಜೀವನದಲ್ಲಿಯೇ ನಾನು ಇಷ್ಟು ಚೆನ್ನಾಗಿ ಎಂದಿಗೂ ನಕ್ಕಿರಲಿಲ್ಲ!' ಎಂದು ಡಾ. ಪಿಲಮನ್ ಹೇಳಿದನು.
ಕೊನೆಗೆ ಅವನು ತನ್ನ ಹೆಸರಿರುವ ಚಿತ್ರದ ಬಳಿಗೆ ಬಂದನು.
"ಇದು ಯಾರು? ನಾನೇ? ಇದು ನಾನಿರಲು ಸಾಧ್ಯವಿಲ್ಲ. ಇದರಲ್ಲಿ ನನ್ನ ಹೋಲಿಕೆಯೇ ಇಲ್ಲ. ಇದನ್ನು ತೆಗೆದುಹಾಕು." ಎಂದು ಜಬರಿಸಿ ಹೇಳಿದನು.
"ಏಕೆ?" ಎಂದು ಡನ್ನೋ ಕೇಳಿದನು.
"ಉಳಿದ ಚಿತ್ರಗಳ ಜೊತೆ ಅದನ್ನೂ ಹಾಗೆಯೇ ನೇತುಹಾಕಿರಲಿ."
"ಡನ್ನೋ, ನಿನಗೆ ಹುಚ್ಚು ಹಿಡಿದಿದೆಯೇ! "ಎಂದು ಡಾ. ಪಿಲ್‌ಮನ್ ಕೋಪದಿಂದ ಹೇಳಿದನು.
'ಅಥವಾ, ಬಹುಶಃ ನಿನ್ನ ಕಣ್ಣುಗಳಿಗೆ ಏನೋ ತೊಂದರೆ ಇರಬಹುದು. ನನ್ನ ಮೂಗಿನ ಬದಲು ಥರ್ಮಾಮೀಟರ್ ಇದೆ ಎಂದು ನಿನಗೆ ಏಕೆ ಅನಿಸಿತು? ಇವತ್ತು ರಾತ್ರಿ ನೀನು ಮಲಗಲು ಹೋದಾಗ ನಿನಗೆ ದೊಡ್ಡ ಪ್ರಮಾಣದ ಹರಳೆಣ್ಣೆ ಕುಡಿಸುತ್ತೇನೆ."
ಡನ್ನೋಗೆ ಹರಳೆಣ್ಣೆ ಎಂದರೆ ತುಂಬಾ ಅಸಹ್ಯ.
"ದಯವಿಟ್ಟು ಹಾಗೆ ಮಾಡಬೇಡ. ಈ ಚಿತ್ರ ನಿನ್ನಂತಿಲ್ಲ ಎಂಬುದು ನನಗೂ ಈಗ ಕಾಣುತ್ತಿದೆ." ಎಂದು ಅವನು ಗೋಳಾಡಿದನು. ಅವನು ಆ ಚಿತ್ರವನ್ನು ಕೆಳಗಿಳಿಸಿ ಹರಿದು ಹಾಕಿದನು.
ಆ ಮೇಲೆ ಎಚ್ಚರಗೊಂಡವನು ಬೇಟೆಗಾರ ಶಾಟ್. ಅವನಿಗೂ ಆ ಎಲ್ಲ ಚಿತ್ರಗಳು ತುಂಬಾ ಇಷ್ಟವಾದವು. ಅವನಿಗೆ ನಗುನಗುತ್ತಾ ಸಾಕಾಗಿ ಹೋಯಿತು. ಆದರೆ ಅವನ ಕಣ್ಣು ತನ್ನದೇ ಚಿತ್ರದ ಮೇಲೆ ಬಿದ್ದ ಕ್ಷಣವೇ ಅವನು ನಗುವುದನ್ನು ನಿಲ್ಲಿಸಿದನು.







"ತುಂಬಾ ಕೆಟ್ಟಿದ್ದ ಚಿತ್ರ. ಅದು ನನ್ನಂತೆಯೇ ಕಾಣುವುದಿಲ್ಲ. ನೀನು ಅದನ್ನು ಹರಿದು ಹಾಕದಿದ್ದರೆ, ಇನ್ನು ಮುಂದೆ ನನ್ನ ಜೊತೆಗೆ ಬೇಟೆಗೆ ಬರಲು ನಾನು ನಿನಗೆ ಎಂದಿಗೂ ಅವಕಾಶ ಕೊಡುವುದಿಲ್ಲ.' ಎಂದು ಶಾಟ್ ಗದರಿಸಿದನು.

ಹೀಗಾಗಿ ಡನ್ನೋ ಶಾಟ್‌ನ ಚಿತ್ರವನ್ನೂ ಕೂಡ ಹರಿದು ಹಾಕಬೇಕಾಯಿತು.

ಉಳಿದವರ ವಿಷಯದಲ್ಲಿಯೂ ಇದೇ ನಡೆಯಿತು. ಪ್ರತಿಯೊಬ್ಬ ಮೈಟ್ಸಗೂ ಉಳಿದ ಎಲ್ಲರ ಭಾವಚಿತ್ರಗಳು ಇಷ್ಟವಾಗುತ್ತಿದ್ದವು. ಆದರೆ ತಮ್ಮ ಹೆಸರಿರುವ ಭಾವಚಿತ್ರ ಮಾತ್ರ ಇಷ್ಟವಾಗುತ್ತಿರಲಿಲ್ಲ.





ಎಲ್ಲರಿಗಿಂತಲೂ ತಡವಾಗಿ ಕಲಾವಿದ ಬ್ಲಾಬ್ಸ್ ಎದ್ದನು. ಅವನು ಯಾವಾಗಲೂ ಉಳಿದವರಿಗಿಂತ ಹೆಚ್ಚು ಹೊತ್ತು ಮಲಗುತ್ತಿದ್ದನು. ಗೋಡೆಯ ಮೇಲಿದ್ದ ತನ್ನ ಚಿತ್ರವನ್ನು ನೋಡಿದಾಗ ಅವನು ತುಂಬಾ ಕೋಪಗೊಂಡು,

"ಇವು ಚಿತ್ರಗಳೇ ಅಲ್ಲ. ಕಲೆಯ ಹೆಸರಿನಲ್ಲಿ ಯಾವುದೇ ಸಂಬಂಧವಿಲ್ಲದ ಬಣ್ಣಗಳ ಗಜಿಬಿಜಿಯಷ್ಟೇ!" ಎಂದು ಹೇಳಿದನು.

ಅವನು ತನ್ನ ಚಿತ್ರವನ್ನು ಗೋಡೆಯಿಂದ ಕಿತ್ತಿ ಹಾಕಿ, ತನ್ನ ಬಣ್ಣಗಳನ್ನು ಮತ್ತು ಕುಂಚಗಳನ್ನು ಡನ್ನೋನಿಂದ ಕಸಿದುಕೊಂಡು ಹೊರ ಹೋದನು. ಹೀಗೆ ಎಲ್ಲರು ಒಂದೊಂದಾಗಿ ತಮ್ಮ ಚಿತ್ರಗಳನ್ನು ಗೋಡೆಯಿಂದ ಕೆಳಗಿಳಿಸಿ ಹರಿದು ಹಾಕಿದರು.

ಗೋಡೆಯ ಮೇಲೆ ಇನ್ನೂ ತೂಗುತ್ತ ಉಳಿದಿದ್ದ ಏಕೈಕ ಚಿತ್ರ ಗಂಕಿಯದ್ದಾಗಿತ್ತು. ಡನ್ನೋ ಅದನ್ನೂ ತೆಗೆದುಕೊಂಡು ತನ್ನ ಸ್ನೇಹಿತನನ್ನು ನೋಡಲು ಹೋದನು.

"ನಿನಗೆ ಬೇಕಿದ್ದರೆ ನಿನ್ನ ಚಿತ್ರವನ್ನು ನೀನೇ ಇಟ್ಟುಕೋ, ಗಂಕಿ!" ಎಂದು ಹೇಳಿದನು. "ಆಮೇಲೆ ನೀನೂ ನಾನೂ ಮತ್ತೆ ಸ್ನೇಹಿತರಾಗೋಣ."

ಗಂಕಿ ಆ ಚಿತ್ರವನ್ನು ತೆಗೆದುಕೊಂಡು ಸಣ್ಣ ಸಣ್ಣ ತುಂಡುಗಳಾಗಿ ಹರಿದು ಹಾಕಿದನು. "ಸರಿ, ಮತ್ತೆ ನಾವು ಸ್ನೇಹಿತರಾಗೋಣ, ಆದರೆ ಇನ್ನು ಮುಂದೆ ನನ್ನ ಚಿತ್ರವನ್ನು ಎಂದಿಗೂ ನೀನು ಚಿತ್ರಿಸುವದಿಲ್ಲ ಎಂದು ಮಾತು ಕೊಡು." ಎಂದು ಗಂಕಿ ಕೇಳಿದನು.

"ನಾನು ಇನ್ನು ಮುಂದೆ ಯಾರ ಚಿತ್ರವನ್ನೂ ಚಿತ್ರಿಸುವದಿಲ್ಲ. ಅದರ ಪ್ರಯೋಜನವೇನು? ಎಷ್ಟು ಶ್ರಮಪಟ್ಟರೂ ಕೊನೆಯಲ್ಲಿ ಸಿಗುವುದು ದೂರುಗಳಷ್ಟೇ. ನನಗೆ ಇನ್ನು ಕಲಾವಿದನಾಗಿರಲು ಇಷ್ಟವಿಲ್ಲ." ಎಂದು ಡನ್ನೋ ಹೇಳಿದನು.







